

ನಾವು ದಾಂಪತ್ಯದ ಬಾಂಧವ್ಯ ಅಂತ ಅಂದುಕೊಂಡಿರುವುದು ನಮ್ಮ ಬಾಲ್ಯದ ಮುಂದುವರಿದ ಭಾಗವೇ?

ಡಾ.ವಿನೋದ ಛೆಬ್ಬಿ

# 27: ಭದ್ರಭಾವದವರ ದಾಂಪತ್ಯ

ಬಾಲ್ಯದಲ್ಲಿ ಪೋಷಕರು ನಡೆಸಿಕೊಳ್ಳುವ ರೀತಿಯನ್ನು ಅನುಸರಿಸಿ ಮಕ್ಕಳು ಒಂದು ನಿರ್ದಿಷ್ಟ ನಂಟಿನ ನಮೂನೆಯನ್ನು ಬೆಳೆಸಿಕೊಳ್ಳುತ್ತಾರೆ ಎಂಬುದಕ್ಕೆ ಬಂದು ನಿಂತಿದ್ದೆವು. ಈಗ, ನಿರ್ದಿಷ್ಟ ನಂಟಿನ ನಮೂನೆಯು ಗಟ್ಟಿಗೊಳ್ಳಲು ಯಾವ್ಯಾವ ನಿರ್ದಿಷ್ಟ ಅಂಶಗಳು ಕಾರಣ ಆಗುತ್ತವೆ, ಹಾಗೂ ಇದಕ್ಕೂ ದಾಂಪತ್ಯದಲ್ಲಿ ತೋರುವ ವರ್ತನಾ ತಾತ್ಪರ್ಯಕ್ಕೂ ಏನು ಸಂಬಂಧ ಎಂದು ದೃಷ್ಟಾಂತಗಳನ್ನು ಮುಂದಿಟ್ಟುಕೊಂಡು ಪರಿಶೀಲಿಸೋಣ.

**ಭದ್ರಭಾವದ ನಂಟು (Secure Attachment Style)**

ಇದೊಂದು ಹೆಣ್ಣಿನ ಕತೆ. ಈಕೆ ನಾಲ್ಕು ತಿಂಗಳು ತಾಯಿಯ ಎದೆಹಾಲು ಕುಡಿದದ್ದು ಅಷ್ಟೆ. ನಂತರ ಅಮ್ಮನೂ ಕೆಲಸಕ್ಕೆ ಸೇರಿದಳು. ಅಮ್ಮಅಪ್ಪ ಮುಂಜಾನೆ ಮನೆಬಿಟ್ಟರೆ ಮರಳುತ್ತಿದ್ದುದು ಸಂಜೆಗೆ. ಅಲ್ಲಿಯ ತನಕ ಮಗುವಿಗೆ ಅಜ್ಜಿಯೇ ಸರ್ವಸ್ವ, ಅಜ್ಜಿಗೆ ಮಗುವೇ ಪ್ರಪಂಚ. ಮಾತು ಬರದ ಮಗುವಿನ ಮುಖಕ್ಕೆ ಮುಖವಿಟ್ಟು ಅಜ್ಜಿ ಬಾಲಭಾಷೆಯಲ್ಲಿ ತಾಸುಗಟ್ಟಲೆ ಮಾತಾಡುತ್ತಿದ್ದಳು. ಆಗ ಮಗುವು ಅಜ್ಜಿಯ ಮುಖವನ್ನೇ ಗಮನಿಸುತ್ತಿತ್ತು. ಅಜ್ಜಿಯ ಪ್ರಿಯವಾದ ಆಟ ಎಂದರೆ ನೆಲದ ಮೇಲೆ ಕಾಲುಚಾಚಿ, ಮಗುವನ್ನು ತೊಡೆಯ ಮೇಲೆ ಕೂಡಿಸಿಕೊಂಡು, ಹಿಂದೆ ಮುಂದೆ ತೂಗುತ್ತ 'ಆನೆ ಬಂತಾನೆ ಯಾವೂರಾನೆ...' ಎಂದು ರಾಗವಾಗಿ ಹೇಳುವುದು. ಆಗ ಮಗುವು ಅಜ್ಜಿಯ ಕೈಗಳ ಜೊತೆಗೆ ತಾನೂ ಕೈತಟ್ಟುತ್ತ ಕಿಲಿಕಿಲಿಗುಟ್ಟುತ್ತಿತ್ತು. ಮಗುವು ಸ್ವಲ್ಪ ಕಿರಿಕಿರಿ ಮಾಡಿದರೂ ಸಾಕು, ತಕ್ಷಣ ಅಜ್ಜಿ ಎಲ್ಲಿದ್ದರೂ ಬಂದು ಎತ್ತಿಕೊಂಡು ಸಾಂತ್ವನಗೊಳಿಸುತ್ತಿದ್ದಳು. ಮಗು ಬಯಸಿದಾಗಲೆಲ್ಲ ಸಿಗುತ್ತಿದ್ದಳು. ಪ್ರೀತಿಯ, ಭರವಸೆಯ ಧಾರೆ ಎರೆಯುತ್ತಿದ್ದಳು.

ಈಕೆ ಮೂರು ವರ್ಷದವಳಾದ ನಂತರ ಅಜ್ಜಿ ಆಗಾಗ ಊರಿಗೆ ಹೋಗುತ್ತಿದ್ದುದು ನೆನಪಿದೆ. ಹಾಗೆ ಹೋದಾಗಲೆಲ್ಲ ಈಕೆ ಮಂಕಾಗಿದ್ದು, ಅಜ್ಜಿಯನ್ನು ನೆನೆಪಿಸಿಕೊಂಡು ಕಾಲ ಕಳೆಯುತ್ತಿದ್ದಳು. ದಿನವೂ ಅಮ್ಮನನ್ನು ಕೇಳುತ್ತ ಅಜ್ಜಿ ಮರಳುವ ದಿನ ಲೆಕ್ಕಹಾಕುತ್ತಿದ್ದಳು. ಅಜ್ಜಿ ಮರಳಿದ ತಕ್ಷಣ ಓಡಿ ತಬ್ಬಿಕೊಂಡು ಕುಣಿಯುತ್ತಿದ್ದಳು. ತಾನೇನೇನು ಮಾಡಿದೆ ಎಂದು ವರದಿ ಒಪ್ಪಿಸುತ್ತಿದ್ದಳು. ಅಜ್ಜಿಯ ಪಕ್ಕದಲ್ಲಿ ಮಲಗಿ ಕತೆ ಕೇಳಿದ್ದೂ ಕೇಳಿದ್ದೇ. ಅವಳಿಗೆ ಆಗಾಗ ಹೊಟ್ಟೆನೋವು ಬರುತ್ತಿತ್ತು. ಅಜ್ಜಿ ಸಾಂತ್ವನ ಹೇಳುತ್ತ ಹೊಟ್ಟೆಗೆ ಶಾಖ ಕೊಟ್ಟರೆ ಮಾಯವಾಗುತ್ತಿತ್ತು. ಅದೇ ಅಮ್ಮ ಶಾಖ ಕೊಟ್ಟರೆ ಕಡಿಮೆ ಆಗುತ್ತಿರಲಿಲ್ಲ. ಕಡಿಮೆ ಆಯಿತೆ ಅಂತ ಅಮ್ಮ ಬಿಗಿಮುಖದಿಂದ ಮತ್ತೆ ಮತ್ತೆ ಕೇಳುವಾಗ ಉತ್ತರಿಸುವುದೇ ಕಿರಿಕಿರಿ ಎನಿಸುತ್ತಿತ್ತು. ಅಮ್ಮ ಅಜ್ಜಿಗೆ ಹಲವಾರು ಬಾರಿ ಈರ್ಷೆಯಿಂದ ಅಂದಿದ್ದುಂಟು: 'ನನ್ನ ಮಗಳು ನನ್ನನ್ನೇ ಪ್ರೀತಿಸದ ಹಾಗೆ ಮಾಡಿಬಿಟ್ಟೆ!' ಈಕೆ ಹತ್ತು ವರ್ಷದವಳಿರುವಾಗ ಅಜ್ಜಿ ತೀರಿಹೋದದ್ದು ಈಕೆಗೆ ಸಹಿಸಲಾರದ ಆಘಾತ. ಅದರ ಬೆನ್ನಹಿಂದೆ ಕಾಯಿಲೆಗಳು ಸಾಲಾಗಿ ಮೈಮೇಲೇರಿ ಬಂದು ಸತಾಯಿಸಿದವು. ಈಕೆ ಒಂದು ವರ್ಷ ಶಾಲೆಗೆ ಹೋಗಲೇ ಇಲ್ಲ.

ಈ ನಮ್ಮ ಕಥಾನಾಯಕಿಗೆ ಹುಟ್ಟಿದಂದಿನಿಂದಲೂ ಮಾತು ಬರುತ್ತಿದೆ ಎಂದು ಕಲ್ಪಿಸಿಕೊಳ್ಳಿ. ಒಂದುವೇಳೆ ಹಾಗಿದ್ದರೆ ಈಕೆ ಏನೇನು ಹೇಳಬಹುದಿತ್ತು? '...ನನ್ನ ಮುಂದೆ ಕೆಲವು ಅಸ್ಪಷ್ಟ ಮುಖಗಳು ಕಂಡು ಮರೆಯಾಗುತ್ತಲಿವೆ... ಮುಖವೊಂದು ಕಂಡಾಗ ಕುತೂಹಲ ಭಾವ ಮೂಡುತ್ತಿದೆ... ಅದು ಮರೆಯಾದಾಗ ಜಾಗ ಖಾಲಿಯಾಗಿ ಕಳವಳ ಆಗುತ್ತದೆ. ಆಗ ಅಳುತ್ತೇನೆ. ಮತ್ತೆ ಮುಖ ಪ್ರತ್ಯಕ್ಷವಾಗುತ್ತದೆ! ಏನು ಮಜಾ ಅಲ್ಲವಾ? ...ಬರಬರುತ್ತ ಒಂದೇ ಮುಖ ಹೆಚ್ಚುಹೆಚ್ಚಾಗಿ ಕಾಣುತ್ತಿದೆ. ಅದರ ಬೊಚ್ಚುಬಾಯಿ ಸದಾ ತೆರೆದುಕೊಂಡೇ ಇದ್ದು ನಗುವಿನ ಶಬ್ದ ಹೊರಡಿಸುತ್ತದೆ. ನನಗೂ ಹಾಗೆಯೇ ಮಾಡಬೇಕೆನ್ನಿಸುತ್ತಿದೆ. ಕೇಕೆ ಹಾಕಿ ನಗುತ್ತೇನೆ. ಕ್ರಮೇಣ ಹೊರಗಿರುವ ಆ ಮುಖ ನನ್ನ ಮನಸ್ಸಿನ ಆಳದೊಳಗೆ ಇಳಿದು ಮನೆ ಮಾಡಿಕೊಳ್ಳುತ್ತಿದೆ. ಆ ಪ್ರತಿಬಿಂಬಕ್ಕೇ ನಾನು ಅಜ್ಜಿ ಎಂದು ಕರೆಯುವುದು. ಅಜ್ಜಿ ನನ್ನೊಳಗೆ ಇರುವುದು ನನಗೆ ಸದಾ ಭದ್ರಭಾವ ಕೊಡುತ್ತಿದೆ. ಅದಿದ್ದರೆ ನಾನು ಯಾವಾಗಲೂ ಸುರಕ್ಷಿತ, ಅಲ್ಲವಾ?'

'ಇತ್ತೀಚೆಗೆ ನನಗೆ ಚಲಿಸುವ ಸಾಮರ್ಥ್ಯ ಬಂದಿದೆ. ಏನೇ ಕಂಡರೂ ಮುಟ್ಟುವ ತವಕ. ಹಿಡಿಯಲು ಧಾವಿಸುತ್ತೇನೆ. ಹಾಗೆ ಮಾಡುವಾಗ ಹೊರಗಿನ ಮುಖ ಮರೆಯಾದರೆ ನನಗೇನೂ ಖಾಲಿ ಅನ್ನಿಸುವುದಿಲ್ಲ. ಯಾಕೆಂದರೆ ಒಂದು ಮುಖ ನನ್ನೊಳಗೇ ಅಚ್ಚೊತ್ತಿದೆಯಲ್ಲ? ಹಾಗಾಗಿ ಹೊರಗಿನ ಮುಖದಿಂದ ದೂರವಾಗಬಲ್ಲೆ. ಖಾಲಿ ಎನ್ನಿಸಿದರೆ ನನ್ನೊಳಗಿನ ಮುಖವನ್ನು ನೆನಪಿಸಿಕೊಳ್ಳಬಲ್ಲೆ. ಅದು ಪ್ರತ್ಯಕ್ಷವಾದಾಗ ಭರವಸೆಯಿಂದ ನನ್ನ ಪ್ರಪಂಚದೊಂದಿಗೆ ಮಗ್ನಳಾಗಬಲ್ಲೆ. ಮರೆಯಾದಾಗ ಮತ್ತೆ ಹೊರಗಿನ ಮುಖ ಹುಡುಕಿ ಸಾಂತ್ವನ ಪಡೆಯಬಲ್ಲೆ. ಆ ಮುಖ ಇಲ್ಲದಿದ್ದರೆ ಸ್ವಲ್ಪ ಹೊತ್ತು ಸಹಿಸಿಕೊಳ್ಳಬಲ್ಲೆ.'

'ನನಗೀಗ ಮೂರು ವರ್ಷ. ಈಗ ಅಜ್ಜಿಯ ಮುಖ ನನ್ನೊಳಗೆ ಪೂರ್ತಿ ಅಡಕವಾಗಿದೆ. ಜೊತೆ ಆಕೆಯ ಅಸ್ತಿತ್ವವೂ ಅಡಕವಾಗಿದೆ. ಅದರಿಂದ ನನ್ನೊಳಗೇ ಭರವಸೆ, ರಕ್ಷಣೆ, ಭದ್ರತೆ, ಪ್ರೀತಿಗಳ ಸೆಲೆ ಹುಟ್ಟುತ್ತಿದೆ. ನನ್ನ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ನನ್ನೊಳಗೇ ಒಬ್ಬರಿದ್ದಾರೆ ಎನ್ನುವುದೇ ರೋಚಕತೆಯ ಸಂಗತಿ. ನನಗೆ ಒಂಟಿತನ ಯಾವೊತ್ತೂ ಬಾಧಿಸಲಾರದು. ಇಷ್ಟಾದರೂ ಬಯಸಿದಾಗ ನಾನು ಅಜ್ಜಿಯನ್ನು ಸಮೀಪಿಸಬಹುದು, ಅವಲಂಬಿಸಬಹುದು, ನಂಬಬಹುದು. ಇಲ್ಲಿ ನನ್ನದೇ ಆದ ಬೆಲೆ ನನಗಿದೆ. ಮಹತ್ವ ಇದೆ. ನಾನು ಹೀಗಿದ್ದೇನೆ ಅಂತ ಹೆಮ್ಮೆಯಿಂದ ನಗುತ್ತೇನೆ. ಅದೇ ಹೆಮ್ಮೆಯನ್ನು, ನಗುವನ್ನು ಇತರರೊಡನೆಯೂ ತೋರಿಸುತ್ತೇನೆ. ಆಗ ಅವರೂ ಹತ್ತಿರವಾಗುತ್ತಾರೆ. ಹೀಗೆ ನಾನು ಇತರರೊಡನೆಯೂ ಬಾಂಧವ್ಯ ಬೆಳೆಸಿಕೊಳ್ಳಬಲ್ಲೆ. ಇದು ನನಗಿಷ್ಟ. ಆದರೂ ಇತರರು ನನ್ನನ್ನು ಕಡೆಗಣಿಸಿದರೆ ಬೇಜಾರಾಗುತ್ತದೆ. ತಿರಸ್ಕೃತಳು ಅನ್ನಿಸುತ್ತದೆ. ಆಗ ನನ್ನೊಳಗಿನ ಅಜ್ಜಿಯ ಅರಿವು ತೇಲಿಬಂದು ಭದ್ರಭಾವ ತರುತ್ತದೆ. ಅಸಹನೆ ನಿಲ್ಲುತ್ತದೆ. ಸಮಚಿತ್ತ ಮೂಡುತ್ತದೆ. ಮತ್ತೆ ಇನ್ನೊಬ್ಬರಿಂದ ಸ್ವಲ್ಪ ಭರವಸೆ ಸಿಕ್ಕರೂ ಸಾಕು, ನಾನು ನಂಬಬಲ್ಲೆ. ನಾನೆಂದರೆ ಆಗದವರನ್ನೂ ನಂಬಬಲ್ಲೆ. ನಂಬುವುದರಲ್ಲಿ ಹಿತವಿದೆ. ಹಾಗೆಯೇ ನನ್ನಷ್ಟಕ್ಕೆ ನಾನಾಗಿ ನನ್ನದೇ ಪ್ರಪಂಚವನ್ನು ಅನ್ವೇಷಿಸುತ್ತ ಮೈಮರೆಯಬಲ್ಲೆ. ಎರಡರಲ್ಲೂ ನನಗೆ ಭದ್ರಭಾವ ಇದೆ.'

ಈ ಹುಡುಗಿ ಬೆಳೆದು ಸಂಗಾತಿಯನ್ನು ಹುಡುಕುವಾಗ ಏನೆನ್ನುತ್ತಾಳೆ? 'ನನ್ನೊಳಗೆ ಪ್ರೀತಿ, ಭದ್ರತೆ, ಸಂತೃಪ್ತಿ ಸಾಕಷ್ಟಿದೆ. ಇವುಗಳನ್ನು ನಾನು ಸಂಗಾತಿಗೂ ಹಂಚಬಲ್ಲೆ. ಸಂಗಾತಿಯನ್ನು ನಿಷ್ಕಾಮದಿಂದ ಪ್ರೀತಿಸಬಲ್ಲೆ. ಆತ ಒಂದುವೇಳೆ ನನ್ನ ಮೇಲೆ ಅಸಮಾಧಾನಗೊಂಡರೆ ಬೇಸರವಾಗಬಹುದು. ಆದರೂ ಅದನ್ನು ಪಕ್ಕಕ್ಕಿಟ್ಟು ಹಪಾಹಪಿ ಇಲ್ಲದೆ ಪ್ರೀತಿಗೋಸ್ಕರ ಮುಂದುವರಿಯಬಲ್ಲೆ. ತಿರಸ್ಕೃತಳಾಗುವ ಸಂಭವವನ್ನು ಎದುರಿಸಬಲ್ಲೆ. ಅನಿಶ್ಚಿತತೆಯನ್ನು ತಡೆದುಕೊಳ್ಳಬಲ್ಲೆ. ನೋವು ಸಹಿಸಿಕೊಳ್ಳಬಲ್ಲೆ. ಯಾಕೆಂದರೆ ನನ್ನನ್ನು ನಾನೇ ಪ್ರೀತಿಸಬಲ್ಲೆ. ನನ್ನಿಷ್ಟದಂತೆ ನಾನು ಬದುಕಬಲ್ಲೆ. ಯಾರೇ ಪ್ರೀತಿ ನಿರಾಕರಿಸಿದರೂ ನನ್ನನ್ನು ನಾನು ಪ್ರೀತಿಸಿಕೊಳ್ಳುತ್ತೇನಲ್ಲ, ಅದು ನನಗೆ ಸದಾ ಬಲಕೊಡುತ್ತದೆ.'

ಇನ್ನು ಸಂಗಾತಿಯೊಡನೆ: ನಿನ್ನೊಡನೆ ನಂಟು ಬೇಕಾದಾಗ ಕೇಳಿ ಪಡೆಯುತ್ತೇನೆ – ಹಿಂದೆಮುಂದೆ ನೋಡದೆ. ಇದು ಸುರಕ್ಷಿತ, ಸುಭದ್ರ. ಕೇಳಿದಾಗ ಸಿಗದಿದ್ದರೆ ನಂತರವಾದರೂ ಸಿಕ್ಕೀತು ಎಂಬ ಭರವಸೆಯಿಂದ ಕಾಯಲು ತಯಾರಿದ್ದೇನೆ. ಎಷ್ಟೇ ಪ್ರೀತಿಯ ಬಂಧನದಲ್ಲೂ ನನಗೆ ಸ್ವಾಯತ್ತತೆಯ ಸ್ವಾತಂತ್ರ್ಯವಿದೆ. ನೀನೂ ನನ್ನಷ್ಟೇ ಸ್ವಾಯತ್ತತೆಯಿಂದ ಸ್ವತಂತ್ರವಾಗಿರಬಹುದು. ಇಬ್ಬರೂ ಬೇಕಾದಾಗಲೆಲ್ಲ ಬೇಕಾದಷ್ಟು ಸಮೀಪಿಸಿ ಸುಖ ಹೊಂದಬಹುದು. ಅನ್ಯೋನ್ಯವಾಗಿರಬಹುದು. ಆತ್ಮೀಯತೆ ಹುಟ್ಟಿಸಿಕೊಳ್ಳಬಹುದು.

ಈಕೆಯ ವರ್ತನಾ ತಾತ್ಪರ್ಯ ಏನಿದ್ದೀತು? 'ನಾನೂ ಸರಿಯಾದ್ದೇನೆ. ನೀನು ಸರಿಯಾಗಿದ್ದೀಯಾ. ನಮ್ಮಿಬ್ಬರಲ್ಲೂ ದೋಷಗಳಿವೆ. ಹಾಗಿದ್ದರೂ ನಾನು ನಿನ್ನನ್ನು ಪ್ರೀತಿಸಬಲ್ಲೆ, ಹಾಗೂ ನನ್ನನ್ನು ನಾನು ಪ್ರೀತಿಸಬಲ್ಲೆ.'

ಇಲ್ಲೇನು ಕಾಣುತ್ತಿದೆ? ಬಾಲ್ಯದ ಬಾಂಧವ್ಯವೇ ಮುಂದುವರಿದು ದಾಂಪತ್ಯದ ಬಾಂಧವ್ಯ ಆಗಿದೆ!

ದಾಂಪತ್ಯದ ಬಗೆಗೆ ನಿಮ್ಮ ಅನಿಸಿಕೆ, ಸಮಸ್ಯೆಗಳನ್ನು ಸುಖೀ ದಾಂಪತ್ಯ ವಿಭಾಗ, ನಂ. 75, ಎಂ. ಜಿ. ರಸ್ತೆ, ಬೆಂಗಳೂರು 01 ಇಲ್ಲಿಗೆ ಕಳುಹಿಸಿ. ದಾಂಪತ್ಯ ಸಮಸ್ಯೆಗಳಿಗೆ ಉಚಿತ ಸಹಾಯವಾಣಿ 8494944888 ಗೆ ಪ್ರತಿ ಶುಕ್ರವಾರ ಮಧ್ಯಾಹ್ನ 2ರಿಂದ 4ರ ತನಕ ಕರೆಮಾಡಿ. ಲೇಖಕರ ವಿಳಾಸ: .www.medisex.org